8 ಶಾಸನಾತ್ಮಕ ನಿರ್ಣಯ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಹಾಗೂ ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆ ಮುಂದೆ ಮಂಡಿಸುತ್ತಿದ್ದೇನೆ.

"ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವು ಪೊಲೀಸ್ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ 'ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳಿಗೆ ನೀಡಿರುವ ಸೌಲಭ್ಯಗಳ ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ರಾಜ್ಯ ಪೊಲೀಸ್ ಪಡೆಗಳ ನೇಮಕಾತಿಯಲ್ಲಿ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಸಡಿಲಗೊಳಿಸುವ' ಬಗ್ಗೆ ರಾಷ್ಟ್ರೀಯ ಅಲ್ಪಸಂಖ್ಯಾತರ ಕಾಯ್ದೆಯ ಪರಿಚ್ಛೇದ 9(3) ಅಧಿನಿಯಮ, 1992ರಡಿಯಲ್ಲಿ ಮೆಮೊರ್ಯಾಂಡಮ್ ಅನ್ನು ಈ ಸದನವು ಅಂಗೀಕರಿಸುವುದು"

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು : ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ಈಗ ನಾಲ್ಕೈದು ವಿಧೇಯಕಗಳಿವೆ, ಏನು ಮಾಡೋಣ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಸಾಹೇಬರು ಹತ್ತು ನಿಮಿಷದಲ್ಲಿ ಬರುವುದಾಗಿ ತಿಳಿಸಿದ್ದಾರೆ. ಆದಕಾರಣ, ಸದ್ಯಕ್ಕೆ ಉಳಿದಿರುವ ಮೂರು ವಿಧೇಯಕಗಳಲ್ಲಿ ಒಂದನ್ನಾದರೂ ತೆಗೆದುಕೊಂಡು ಪೂರ್ತಿಗೊಳಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ನಮ್ಮಿಂದಾಗುವುದಿಲ್ಲ ದಯವಿಟ್ಟು ಕ್ಷಮಿಸಬೇಕು.

ಅಧ್ಯಕ್ಷರು : ಸಹಕಾರ ಖಾತೆಗೆ ಸಂಬಂಧಿಸಿದಂತೆ ಒಂದು ವಿಧೇಯಕವಿದ್ದು, ಅದನ್ನು ಈಗ ತೆಗೆದುಕೊಳ್ಳೋಣ.

9 ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕ, 2004.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, 2004ರ ಕರ್ನಾಟಕ ಮಿತಿ ಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಖಾಸಗಿ ಲೇವಾದೇವಿದಾರರು ಹೆಚ್ಚು ಬಡ್ಡಿ ವಿಧಿಸುವುದರಿಂದಾಗಿ ಬಹಳಷ್ಟು ಸಾರ್ವಜನಿಕರು ಅನಾಹುತಕ್ಕೊಳಗಾಗಿರುವುದು ನಮ್ಮ ಅನುಭವಕ್ಕೆ ಬಂದಿದೆ. ಅಲ್ಲದೆ, ಇದರಿಂದ ಬಹಳಷ್ಟು ಆತ್ಮಹತ್ಯೆಗಳೂ ಸಹ ನಡೆದಿದೆ. ತಿಂಗಳಿಗೆ ಸುಮಾರು 5 ರೂ, 10 ರೂ. ತರಹ ಬಡ್ಡಿ ವಿಧಿಸುವ ಮೂಲಕ ಸಾರ್ವಜನಿಕರನ್ನು ಬಹಳಷ್ಟು ಸಂಕಷ್ಟಕ್ಕೀಡುಮಾಡುತ್ತಿರುವುದನ್ನು ಸರ್ಕಾರ ಗಮನಿಸಿ, ಎರಡೂ ಅಧಿವೇಶನಗಳು ಇಲ್ಲದಿರುವ ಸಮಯದಲ್ಲಿ ಪರಿಸ್ಥಿತಿ ತುರ್ತಾಗಿದ್ದುದರಿಂದ ಸುಗ್ರಿವಾಜ್ಞೆ ಮೂಲಕ ಜಾರಿಗೆ ತಂದು ಸಾರ್ವಜನಿಕರ ಅನುಕೂಲಕ್ಕೋಸ್ಕರ ಒಂದು ಅವಕಾಶ ಮಾಡಿಕೊಡಲಾಯಿತು. ಈ ಹಿಂದೆ unsecured loanಗೆ ಶೇಕಡ 32ರ ಬಡ್ಡಿ ದರ ವಿಧಿಸುತ್ತಿದ್ದರೆ, secured loan ಗೆ ಶೇಕಡ 21ರಷ್ಟು ವಿಧಿಸಲಾಗುತ್ತಿತ್ತು.